ಪ್ರೋಷಕ ಕಲಾವಿದರನ್ನ ಕಳಿಸಿಕೊಡ್ತಾನಂತೆ. ನನ್ನನ್ನು ಕಳಿಸಿದ್ದಾಗ ನನಗೆ ದಿನಕ್ಕೆ ನಾನ್ನೂರು ರೂಪಾಯಿ ಕೊಡಿಸ್ತಾನೇ ಅವನಿಗೆ ಇನ್ನೂರನ್ನು ಕೊಟ್ಟು ನಾನು ಇನ್ನೂರನ್ನು ಇಟ್ಟುಕೊಳ್ಳೋದು ಅಂತ ಮಾತಾಡಿದ್ದಾನೆ.

ತನ್ನ ಹತ್ತಿರ ಇರೋ ಇನ್ನು ಹತ್ತು ಸಹಕಲಾವಿದರ ಜೊತೆಯಲ್ಲಿ ನನಗೊಂದು ನಿವಾಸ ಸ್ಥಳ ಮಾಡಿಕೊಡ್ತೀನಿ ಮತ್ತು ಬೆಳಿಗ್ಗೆ ಟಿಫನ್, ಮಧ್ಯಾಹ್ನ ಊಟ, ಶೂಟಿಂಗ್ ಯೂನಿಟ್ ಅವರೇ ನೋಡಿಕೊಳ್ಳುತ್ತಾರೆ, ರಾತ್ರಿಯ ಊಟ ಮಾತ್ರ ನಾನೇ ನೋಡಿಕೋಬೇಕು ಅಂತ ಹೇಳಿದ ಆ ಹುಡುಗ. ಅವರಿಬ್ಬರಗೂ ನಮಗೆ ಸಹಾಯ ಮಾಡಿ ಸ್ವಲ್ಪಮಟ್ಟಿಗೆ ನಮ್ಮನ್ನು ಸುಧಾರಣೆ ಮಾಡೋ ಉದ್ದೇಶ ಪಾಪ!. ಆ ಹುಡುಗನೂ ಒಳ್ಳೆಯವನಾಗಿ ಕಾಣುತ್ತಾನೆ, ಏನು ಮುಚ್ಚುಮರೆ ಇಲ್ಲದೆ ಎಲ್ಲಾ ಕರಾರವಾಗಿ ಹೇಳಿದ್ದಾನೆ. ಚೆನ್ನಾಗಿ ಬಾಳಿ ಬದುಕಿದವನು ಹೀಗೆ ಜೂನಿಯರ್ ಕಲಾವಿದನಾಗಿ ಎಲ್ಲರ ಮಧ್ಯೆ ಇರಬೇಕಾಗಿದ್ದ ನನಗೆ ಮುಜುಗರವಾಗಬಾರದು ಅಂತ ನನ್ನ ಹೆಸರನ್ನ 'ರಾಘವಯ್ಯ' ಅಂತ ಬದಲಾಯಿಸಿಕೊಳ್ಳಿ ಅಂತ ಹೇಳಿದ.

'ಆದ್ರೆ ... ಈ ಪರಿಸ್ಥಿತೀಲಿ ನಿನ್ನ ಒಬ್ಬಳನ್ನೇ ಬಿಟ್ಟು, ತಿಂಗಳಿಗೆ ಸಾವಿರ ಪಗಾರ ತೊಗೊಳ್ತಾರೋ ಗುಮಾಸ್ತ ಕೆಲಸವನ್ನು ಬಿಟ್ಟು ಹೋಗುವುದಾ ಅಂತ ಯೋಚ್ನೆ' ಮುಗುಳ್ನಗುತ್ತಾ ಎಂದಳು ಸರಸ್ವತಿ. 'ನನಗೇನೂ ಆಗುವುದಿಲ್ಲ ಬಿಡಿ'.

ಅಂಗಡಿ ಗುಮಾಸ್ತನಾಗಿ ತಿಂಗಳೆಲ್ಲಾ ಕಷ್ಟಪಟ್ಟು ಸಾವಿರ ರೂಪಾಯಿ ತರೋದಕ್ಕಿಂತ ನಿಮಗೆ ಆಗಿ ಬಂದಿರೋ ಆ

